**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ**

**ಎಸ್.ಸಿ.ನಂಃ** 201/2022

**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 11.06.2024.**

**ಪಾಟೀಸವಾಲುಃ ಆಪಾದಿತರ ಪರ ಶ್ರೀ ಎ.ಜೆ.ಆರ್. ವಕೀಲರಿಂದಃ**

1. ನಾನು ಬಿ.ಕಾಂ ಪದವೀಧರ. ಚಾಸಾ-1 ಹಾಗೂ 6 ರವರು ನನಗೆ ಸ್ನೇಹಿತರು ಎಂದರೆ ಸಾಕ್ಷಿಯು ಪರಿಚಯವಷ್ಟೆ ಎಂದು ನುಡಿಯುತ್ತಾರೆ. ನಿಪಿ-2 ರ ಮಹಜರ್ ಕ್ರಮವನ್ನು ಜರುಗಿಸಲು ಪೊಲೀಸರು ನನಗೆ ನೋಟೀಸ್ ನೀಡಿರುತ್ತಾರೆ. ಸದರಿ ನೋಟೀಸನ್ನು ನಾನು ಸ್ವೀಕರಿಸಿ ಸಹಿ ಮಾಡಿರುತ್ತೇನೆ. ಪೊಲೀಸರು ನನ್ನನ್ನು ಫೋನ್ ಮುಖಾಂತರ ಸಂಪರ್ಕಿಸಿದರು. ನಂತರ ನೋಟೀಸನ್ನು ಸ್ವೀಕರಿಸಲು ಸ್ಥಳಕ್ಕೆ ಹೋಗಿರುತ್ತೇನೆ. ಮಹಜರ್ ಕ್ರಮ ಜರುಗಿಸುವ ಜಾಗದಲ್ಲಿ ಬಹಳ ಜನ ಇದ್ದರು ಎಂದರೆ ಸರಿಯಲ್ಲ. ನಿಪಿ-2 ರ ಮೂಲಕ ಅಮಾನತು ಪಡಿಸಿಕೊಂಡಂತಹ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇದೆ. ನಿಪಿ-2 ರಲ್ಲಿ ಜರುಗಿಸಿದಂತಹ ಮಹಜರ್ ಕ್ರಮದ ಜಾಗದ ಚೆಕ್ಕುಬಂದಿ ಈ ರೀತಿ ಇರುತ್ತದೆ. ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ಖಾಸಗಿಯವರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಮನೆ ಮಾಲೀಕರ ಮನೆ ಇರುತ್ತದೆ. ನಿಪಿ-2 ರ ಮಹಜರ್ ಕ್ರಮವನ್ನು ಮದ್ಯಾಹ್ನ 1.00-2.00 ಗಂಟೆವರೆಗೆ ಜರುಗಿಸಿರುತ್ತಾರೆ. ನಿಪಿ-2 ರಲ್ಲಿರುವ ಸಹಿಯನ್ನು ನಾನು ಪೊಲೀಸ್ ಠಾಣೆಯಲ್ಲಿ ಹಾಕಿದ್ದು ಎಂದರೆ ಸರಿಯಲ್ಲ. ಚಾಸಾ-1 ಹಾಗೂ 6 ರವರ ಕೋರಿಕೆ ಮೇರೆಗೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,

ಹಾಸನ.